ಆ) ಸದರಿ ಗ್ರಾಮ/ಮಜರೆಗೆ ವಿದ್ಯುತ್ ಪೂರೈಸಲು ರಾಜೀವಾ ಗಾಂಧಿ ಗ್ರಾಮೀಣ ವಿದ್ಯುದೀಕರಣ ಯೋಜನೆಯಡಿಯಲ್ಲಿ ಬರುವ ಸಪ್ಲಿಮೆಂಟರಿ ವಿಸ್ತೃತ ಯೋಜನಾ ವರದಿಯಡಿಯಲ್ಲಿ ಪ್ರಸ್ತಾವನೆ ಸಲ್ಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಗ್ರಾಮಕ್ಕೆ ಸುಮಾರು 12 ಕಿ.ಮೀ. ಉದ್ದದ 11 ಕೆ.ವಿ. ಮಾರ್ಗವನ್ನು ಶಿವಮನೆ ಗ್ರಾಮದಿಂದ ಅಳವಡಿಸಬೇಕಾಗಿದ್ದು, ಈ ಕಾಮಗಾರಿಗಳ ಅಂದಾಜು ವೆಚ್ಚ ರೂ.51 ಲಕ್ಷಗಳಾಗಿರುತ್ತದೆ. ಪ್ರಸ್ತುತ ಶಿವಮನೆ ಗ್ರಾಮದ ವಿದ್ಯುದೀಕರಣ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಅಂಗನವಾಡಿ ಮಕ್ಕಳಿಗೆ ಕುರ್‌ಕುರೆ ಆಹಾರವನ್ನು ರದ್ದು ಮಾಡಿರುವುದು

836 (902) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿ ಮಕ್ಕಳಿಗೆ "ಕುರ್ ಕುರೆ" ಆಹಾರವನ್ನು ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ "ಕುರ್ ಕುರೆ" ನೀಡುವುದರಿಂದ ಮಕ್ಕಳ ಆರೋಗ್ಯಕ್ಕೆ ತೊಂದರೆಯಾಗುತ್ತಿದ್ದು ಬದಲಿ ವ್ಯವಸ್ಥೆಯಾಗಿ ಬ್ರೆಡ್ ಹಾಲನ್ನು ನೀಡಲು ಸರ್ಕಾರ ಕ್ರಮಕ್ಕೈಗೊಳ್ಳುವುದೇ ಮಾಹಿತಿ ನೀಡುವುದು?

ಶ್ರೀ ಸಿ.ಸಿ. ಪಾಟೀಲ್ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :

ಅ) ಅಂಗನವಾಡಿ ಮಕ್ಕಳಿಗೆ "ನ್ಯೂಟ್ರಿ ಕಾರನ್ ಪಾಪ್" ನೀಡಲಾಗುತ್ತಿದೆ.

ಆ) ಈ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ. ಜನವರಿ ಮೊದಲನೇ ವಾರದಲ್ಲಿ ಮಹಿಳಾ ಪೂರಕ ಪೌಷ್ಟಿಕ ಆಹಾರ ಘಟಕಗಳಿಂದ ಸರಬರಾಜಾಗುತ್ತಿರುವ ಆಹಾರ ಪದಾರ್ಥಗಳಲ್ಲಿ ಬದಲಾವಣೆ ತರಲಾಗುತ್ತಿದ್ದು, ಸ್ಥಳೀಯ ಜನರ ಬೇಡಿಕೆಗನುಗುಣವಾಗಿ ಆಹಾರವನ್ನು ಪಡೆಯಬಹುದಾಗಿರುತ್ತದೆ.